

ಭಾರತದ ನಾಯಕ ಹರ್ಪ್ರೀತ್ ಸಿಂಗ್ ಮತ್ತು ತಂಡ

# ಕಾಲ್ಚೆಂಡಿನ ಕಸುವು

**ಅಂತರರಾಷ್ಟ್ರೀಯ ಫುಟ್‌ಬಾಲ್ ಫೆಡರೇಷನ್ ಪ್ರತಿ ಎರಡು ವರ್ಷಗಳಿಗೊಮ್ಮೆ ಫುಟ್‌ಬಾಲ್ ಪ್ರಪಂಚದ ಯುವಶಕ್ತಿಯನ್ನು ಒರೆಗೆ ಹಚ್ಚುತ್ತದೆ. 17 ವರ್ಷದ ಒಳಗಿನವರ ಈ ಫುಟ್‌ಬಾಲ್ ವಿಶ್ವಕಪ್‌ನಲ್ಲೇ, ಕಾಲ್ಚೆಂಡು ಸಾಮ್ರಾಜ್ಯದ ಹೊಸ ದೊರೆಗಳು ಉದಯಿಸುತ್ತಾರೆ.**

**■ ವಿಕ್ರಂ ಕಾಂತಿಕೆರೆ**

ದೇಶದಲ್ಲೀಗ 17 ವರ್ಷದೊಳಗಿನವರ ವಿಶ್ವಕಪ್ ಫುಟ್‌ಬಾಲ್ ಟೂರ್ನಿಯ ಸಂಭ್ರಮ. ಟೂರ್ನಿಗೆ ಬೆಂಗಳೂರಿನ ಸಂಜೀವ್ ಸ್ಟಾಲಿನ್ ಮತ್ತು ಹೆನ್ರಿ ಅಂಥೋನಿ ಆಯ್ಕೆಯಾದಾಗ ರಾಜ್ಯವೇ ಪುಳಕಗೊಂಡಿತ್ತು. ಬೆಂಗಳೂರು ಮಹಾನಗರದ ಫುಟ್‌ಬಾಲ್ 'ಗಲ್ಲಿ'ಗಳೆಂದೇ ಪ್ರಸಿದ್ಧವಾದ ಮರ್ಫಿ ಟೌನ್, ಆಸ್ಟಿನ್ ಟೌನ್ ಮುಂತಾದ ಪ್ರದೇಶಗಳಲ್ಲಿ ಮಾತ್ರವಲ್ಲ, ಗದಗ ನಗರದ ಸೆಟ್ಲ್‌ಮೆಂಟ್, ಹುಬ್ಬಳ್ಳಿಯ ಗದಗ ರಸ್ತೆಯ ಚಾಲುಕ್ಯ ನಗರದಂಥ ಪ್ರದೇಶ-ಗಳಲ್ಲೂ ಫುಟ್‌ಬಾಲ್ ಪ್ರಿಯರು ರೋಮಾಂಚನಗೊಂಡಿದ್ದರು. ಉತ್ತರ ಕನ್ನಡ ಜಿಲ್ಲೆಯ ಮುಂಡಗೋಡ ಟಿಬೆಟನ್ ಕೇಂದ್ರಗಳ ಫುಟ್‌ಬಾಲ್ ಅಂಗಳದಲ್ಲೂ ಹುಬ್ಬೇರಿಸಿದವರಿದ್ದಾರೆ.

ವಿಶ್ವಕಪ್‌ನಲ್ಲಿ ಭಾರತದ ಮೊದಲ ಗೋಲು ಗಳಿಸಿ ಇತಿಹಾಸದ ಪುಟ ಸೇರಿದ ಜೀಕ್ಸನ್ ತೌನೊಜಾಮ್ ಅವರ ಆ ಸಾಧನೆಗೆ ಚೆಂಡನ್ನು 'ಸಪ್ಲೈ' ಮಾಡಿದ್ದು ಕನ್ನಡಿಗ ಸ್ಟಾಲಿನ್!

ಎರಡು ವರ್ಷಗಳಿಗೊಮ್ಮೆ ನಡೆಯುವ ಈ 'ಯುವ ಹಬ್ಬ' ಭಾರತದಲ್ಲಿ ಹೆಚ್ಚು ಸದ್ದು ಮಾಡುತ್ತಿರಲಿಲ್ಲ. ಆದರೆ ಈ ಬಾರಿ ಯುವ ಫುಟ್‌ಬಾಲ್ ಆಟ ಸಂಚಲನ ಉಂಟು ಮಾಡಿದೆ. ಭಾರತದಲ್ಲಿ ಇದೇ ಮೊದಲ ಬಾರಿ ಟೂರ್ನಿ ನಡೆದಿದ್ದು ಒಂದು ಕಾರಣ. ಟೂರ್ನಿಯಲ್ಲಿ ಭಾರತ ಮೊದಲ ಬಾರಿ ಪಾಲ್ಗೊಂಡಿದ್ದು ಮತ್ತೊಂದು ಕಾರಣ. ದೇಶದ ಕ್ರೀಡಾ ಇತಿಹಾಸದಲ್ಲಿ ಹೊಸ ಅಧ್ಯಾಯ ಬರೆದಿರುವ ಟೂರ್ನಿ ಭಾರತೀಯ ಫುಟ್‌ಬಾಲ್‌ನಲ್ಲಿ ಹೊಸ ಕನಸು ಮೂಡಿಸಿದೆ.

1985ರಿಂದ ನಡೆಯುತ್ತಿರುವ 17 ವರ್ಷದೊಳಗಿನವರ ವಿಶ್ವಕಪ್ ಫುಟ್-ಬಾಲ್‌ನಲ್ಲಿ ಪ್ರತಿ ಬಾರಿ 25ಕ್ಕೂ ಹೆಚ್ಚು ರಾಷ್ಟ್ರಗಳು ಪಾಲ್ಗೊಳ್ಳುತ್ತವೆ. ರಾಷ್ಟ್ರೀಯ ತಂಡದಲ್ಲಿ ಆಡಲು ಅನೇಕ ಆಟಗಾರರಿಗೆ ಈ ಟೂರ್ನಿ ಅವಕಾಶದ ಹೆಬ್ಬಾಗಿಲು. 16–17 ವರ್ಷದ ಆಟಗಾರರೇ ಈ ಟೂರ್ನಿಯಲ್ಲಿ ಆಡುವುದ-ರಿಂದ 19, 20 ಮತ್ತು 23 ವರ್ಷದೊಳಗಿನವರ ಟೂರ್ನಿಗೆ ಆಯ್ಕೆಯಾ-ಗಲು, ರಾಷ್ಟ್ರೀಯ ತಂಡದ ಆಯ್ಕೆ ಸಮಿತಿಯ ಗಮನ ಸೆಳೆಯಲು ಇಲ್ಲಿ ಹೆಚ್ಚು ಅವಕಾಶಗಳಿವೆ. ಉತ್ತಮ ಸಾಧನೆಯಿಂದ ರಾಷ್ಟ್ರೀಯ ತಂಡದಲ್ಲಿ ಮಿಂಚಿ-ದವರು ಸಾಕಷ್ಟಿರುವುದರಿಂದಲೇ ಈ ಟೂರ್ನಿಗೆ ಹೆಚ್ಚು ಮಹತ್ವ.

17 ವರ್ಷದೊಳಗಿನವರ ವಿಶ್ವಕಪ್ ಟೂರ್ನಿಗಳಲ್ಲಿ ಬೆಳಗಿದವರು ಮತ್ತು 'ಗೋಲ್ಡನ್ ಬೂಟ್' (ಅತಿ ಹೆಚ್ಚು ಗೋಲು ಗಳಿಸಿದವರಿಗೆ ನೀಡುವ ಪ್ರಶಸ್ತಿ), 'ಗೋಲ್ಡನ್ ಬಾಲ್' (ಪ್ರಭಾವ ಬೀರಿದ ಆಟಗಾರರಿಗೆ ನೀಡುವ ಪ್ರಶಸ್ತಿ)